ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಹಿಂದೆ ಈ ಪ್ರಶ್ನೆಯನ್ನು ಕೇಳಿದಾಗ, ಮಾನ್ಯ ಮಂತ್ರಿಗಳು ಡಾ. ಅಂಬೇಡ್ಕರ್ ಜನ್ಮಶತಾಬ್ದಿಯ ದ್ಯೋತಕವಾಗಿ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆ ಕಾರಣ, ಈ ವಿಚಾರಕ್ಕಾಗಿ ಹೇಳುತ್ತೇನೆ. ಡಾ. ಅಂಬೇಡ್ಕರ್ ಜನ್ಮಶತಾಬ್ದಿಗಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ..

ಶ್ರೀ ಡಿ.ಕೆ. ಶಿವಕುಮಾರ್ : ಅದೇ ಪ್ರಕಾರ, ಈಗಾಗಲೇ ೧೧ ಜನರನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ.ಪಿ. ವೆಂಕಟೇಶ್ : ಪ್ರತಿಯೊಂದು ಜಿಲ್ಲೆಯಲ್ಲೂ ಬಂಧೀಖಾನೆ ಸಮಿತಿ ಎಂದು ಇರುತ್ತದೆ. ಆ ಸಮಿತಿಯಲ್ಲಿ ಖೈದಿಗಳು ಅರ್ಜಿ ಹಾಕಿಕೊಂಡಿರುತ್ತಾರೆ. ಸಮಿತಿಯವರು ಈ ಅರ್ಜಿಗಳ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ, ಅವರು ಬಿಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯೇ, ಇಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ : ಇದರ ವಿಚಾರದಲ್ಲಿ ಈಗಾಗಲೇ ಅಮೆಂಡ್‌ಮೆಂಟ್ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದಲ್ಲಿ ನಾನೂ ಕೂಡ ಸೆಂಟ್ರಲ್ ಜೈಲಿಗೆ ಹೋಗಿ ಬಂದಿದ್ದೇನೆ. ಖೈದಿಗಳ ಹತ್ತಿರ ಮಾತಿನಾಡಿದ್ದೇನೆ, ಅಲ್ಲಿ ಏನಾಗಿದೆ ಎಂದರೆ, ಖೈದಿಗಳಿಗೆ ವಯಸ್ಸಾಗಿ, ಕಣ್ಣು ಕಾಣದೆ, ಕಾಲು ಹೋಗಿರುವವರೂ ಇದ್ದಾರೆ. ನಾನು ಅವರನ್ನು ನೋಡಿ, ಕೆಲವರನ್ನು ಬಿಡುಗಡೆ ಮಾಡಬೇಕು, ಅಂಬೇಡ್ಕರ್ ಜನ್ಮಶತಾಬ್ದಿಗೆ ಸಂಬಂಧಪಟ್ಟ ಹಾಗೆ ಎನ್ನತಕ್ಕಂತಾದ್ದನ್ನು ವಿಚಾರ ಮಾಡಿ, ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮುಂಚೆ ಇರುವ ಕಾನೂನು ಪ್ರಕಾರ, ಆ ತಾರೀಖಿನೊಳಗೆ ಬರುವವರನ್ನು ಮಾತ್ರ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಯಿತು. ನಾವು ಕಾರ್ಯಕ್ರಮ ಹಾಕಿದ್ದೇವೆ. 11 ಜನರನ್ನು ಈಗಾಗಲೇ ಮಾನ್ಯ ಸಚಿವರು ಹೇಳಿರುವಂತೆ ಬಿಡುಗಡೆ ಮಾಡಿದ್ದೇವೆ. ಉಳಿದಿರತಕ್ಕಂಥವರು ಏನಿದ್ದಾರೆ, ಅತಿ ವಯಸ್ಸಾಗಿ, ನೋಡಿದರೆ ಬೇಜಾರಾಗುತ್ತದೆ. ಕಾನೂನು ಪ್ರಕಾರ ಅವರನ್ನು ತಡೆದಿರಬಹುದು, ಶಿಕ್ಷೆ ಕೊಟ್ಟಿರಬಹುದು. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಇಲ್ಲ. ಇದರ ಬಗ್ಗೆ ಏನಾದರೊಂದು ತೀರ್ಮಾನ ಮಾಡಿ ಎಂದು ಇಂಡಿಯಾ ಸರ್ಕಾರಕ್ಕೆ ಬರೆದಿದ್ದೇವೆ, ಇಲ್ಲದೆ ಹೋದರೆ ರಾಜ್ಯಸರ್ಕಾರಕ್ಕೆ ಪವರ್ಸ್ ಬರುವುದಿಲ್ಲವೆಂದು ಹೇಳಿದ್ದೇವೆ. ಅವರಿಂದ ಇನ್ನೂ ಏನೂ ಬಂದಿಲ್ಲ. ಬಂದಕೂಡಲೇ ನಾವು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ನಗರಾಭಿವೃದ್ಧಿ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು

2673 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದ ನಗರಾಭಿವೃದ್ಧಿ ಯೋಜನೆಗಳಿಗೆ ಅದರಲ್ಲೂ ಸಾರಿಗೆ, ನೀರು ಸರಬರಾಜು ಮತ್ತು ಕೊಳಚೆ ನಿರ್ಮೂಲನಾ ಕಾರ್ಯಕ್ರಮಗಳಿಗಾಗಿ ಸುಮಾರು 600 ಕೋಟಿ ರೂ.ಗಳ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ವಿಷಯದಲ್ಲಿ ತೆಗೆದುಕೊಂಡ ತೀರ್ಮಾನವೇನು ?

ಇ) ಇತರೆ ರಾಜ್ಯ ಸರ್ಕಾರಗಳು ಈ ನೆರವು ಪಡೆಯುತ್ತಿರುವಾಗ್ಗೆ, ಸರ್ಕಾರಕ್ಕೆ ಈ ನೆರವು ಪಡೆಯುವ ಇಚ್ಛೆ ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಗರ ಸಾರಿಗೆ ಯೋಜನೆಗಾಗಿ ವಿಶ್ವಬ್ಯಾಂಕಿನ ನೆರವು ಪಡೆಯುವ ಪ್ರಸ್ತಾವನೆ ಇದೆ. ಇದರಲ್ಲಿ ಬೆಂಗಳೂರು ನಗರದ ಹೊರಗಿನ ಮತ್ತು ನಡುವಿನ ವರ್ತುಲ ರಸ್ತೆಗಳ ನಿರ್ಮಾಣಕ್ಕೆ ರೂ. 65.754 ಕೋಟಿ ವೆಚ್ಚದ ಪ್ರಸ್ತಾವನೆ ಇದೆ.

ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸುಮಾರು 1000 ಕೋಟಿ ರೂಗಳ ವೆಚ್ಚದ ಕಾವೇರಿ 4ನೇ ಹಂತದ ಯೋಜನೆಗೆ ವಿಶ್ವಬ್ಯಾಂಕಿನ ಧನ ಸಹಾಯ ಪಡೆಯುವ ಪ್ರಸ್ತಾವನೆ ಇದೆ.

ಆ) ವರ್ತುಲ ರಸ್ತೆಗಳ ನಿರ್ಮಾಣಕ್ಕೆ ವಿಶ್ವಬ್ಯಾಂಕಿನ ಧನ ಸಹಾಯ ಪಡೆಯುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಕಾವೇರಿ 4ನೇ ಹಂತದ ಯೋಜನೆಗೆ ವಿಶ್ವಬ್ಯಾಂಕಿನ ನೆರವು ಪಡೆಯುವ ಬಗ್ಗೆ ಯಾವುದೇ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲಾ.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಹಾಕಿರುವ ಪ್ರಶ್ನೆ. Whether the Government is in receipt of proposals for World Bank Assistance for Urban Development Projects in Karnataka Particularly in regard to Transportation, Water Supply,Slum Clearance to the extent of about Rs. Six hundred Crores", the answer is "Yes" there is a proposal by BDA to obtain world bank and there is also a proposal by Bangalore Water Supply etc., What I am concerned is, is the Government seriously considering the proposal of the World Bank team which has visited Bangalore a couple of years ago and given some proposals. They have given elaborate proposals.

ಈ ಪ್ರಪೋಸಲ್ಸ್‌ನ್ನು ಯಾರಾದರೂ ಸ್ಟಡಿ ಮಾಡಿ ಅದನ್ನು ಸದುಪಯೋಗ ಮಾಡಿ ಕೊಳ್ಳಬೇಕೆನ್ನುವ ಅಭಿಪ್ರಾಯ ಸರಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿ ಹಲವಾರು ವರ್ಷಗಳ ಹಿಂದೆ ವರ್ಲ್ಡ್ ಬ್ಯಾಂಕ್‌ಗೆ ಕೊಟ್ಟಿದ್ದೇವೆ. ಇದರಲ್ಲಿ ಬಿ.ಟಿ.ಎಸ್.ಗೆ ಹಣ ಕೊಡುವುದು, ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ಫ್ಲೈ ಓವರ್ಸ್ ಮತ್ತು ಸಬ್ ವೇಸ್ ಮಾಡುವುದಕ್ಕೆ ಹಣ ಕೊಡುವುದು, ಬಿ.ಡಿ.ಎ.ಗೆ ಕೊಡುವುದು ಈ ರೀತಿ ಸುಮಾರು 350 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಕೊಟ್ಟಿದ್ದೇವೆ. ಆದರೆ ವರ್ಲ್ಡ್ ಬ್ಯಾಂಕ್‌ನವರು ಇದರಲ್ಲಿ ಬಿ.ಟಿ.ಎಸ್.ನ್ನು ಸೆಪರೇಟ್ ಮಾಡಬೇಕು, ಎರಡೆರಡು ವರ್ಷಕ್ಕೊಂದು ಸಲ ಫೇರ್ ಹೈಕ್ ಮಾಡಬೇಕು ಎಂದು ಹಲವಾರು ಕಂಡೀಷನ್ಸ್ ಹಾಕಿದರು. ಆದುದರಿಂದ ಸರಕಾರದವರು ಇದನ್ನು ಬೈಫರ್ಕೇಟ್ ಮಾಡಿರುತ್ತಾರೆ. ಬಿ.ಸಿ.ಸಿ. ಯವರು ವರ್ಲ್ಡ್ ಬ್ಯಾಂಕ್ ಹಣ ಬೇಕಾಗಿಲ್ಲ, ನಾವೇ ಫ್ಲೈ ಓವರ್ಸ್ ಮತ್ತು ಸಬ್‌ವೇಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಬಿ.ಟಿ.ಎಸ್.ನ್ನು ಬೈಫರ್ಕೇಟ್ ಮಾಡುವ ವಿಚಾರ ಇದೆ. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನವರೂ ಕೂಡ ನಮಗೆ ವರ್ಲ್ಡ್ ಬ್ಯಾಂಕ್ ಹಣ ಬೇಡ, ಬಹಳ ಕಂಡೀಷನ್ಸ್ ಇದೆ, ನಾವೇ ಮಾಡಿ ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದರಿಂದ ಇದನ್ನು ಬೇರೆ ಬೇರೆಯಾಗಿ

ಬೈಫರ್ಕೇಟ್ ಮಾಡಿರುತ್ತೇವೆ. ಕರ್ನಾಟಕ ಸ್ಲಮ್ ಕ್ಲಿಯರೆನ್ಸ್ ಬೋರ್ಡ್, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಇವುಗಳ ಸಮಗ್ರ ಯೋಜನೆಗೆ 40 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿ ವರ್ಲ್ಡ್ ಬ್ಯಾಂಕ್‌ಗೆ ಸಬ್‌ಮಿಟ್ ಮಾಡಿರುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಮಾನ್ಯ ಮಂತ್ರಿಯವರ್ಯರು ಏನು ಹೇಳಿದ್ದಾರೆ ಅದೆಲ್ಲಾ ಕರೆಟ್ಟ್. ಇಲ್ಲಿ ಬಂದಿರುವುದು ವರ್ಲ್ಡ್ ಬ್ಯಾಂಕ್ ಟೀಮ್‌ನವರು ಒಂದು ಪ್ರಪೋಸಲ್ ಕೊಟ್ಟಿದ್ದಾರೆ. 600-700 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯಾದ್ಯಂತ ಇರುವ 7-8 ನಗರಗಳಿಗೆ, ಅಲ್ಲಿನ ಅರ್ಬನ್ ಡೆವೆಲಪ್‌ಮೆಂಟ್ ವಿಷಯದಲ್ಲಿ ಅವಕಾಶ ಮಾಡಿಕೊಡಬೇಕೆಂದು ಪ್ರಪೊಸಲ್ ಕೊಟ್ಟಿದ್ದಾರೆ. ಈ ವಿಷಯವಾಗಿ ಒಂದೆರಡು ಸಲ ಬಂದು ಮಾತನಾಡಿದ್ದಾರೆ. ಅದು ಆದಮೇಲೆ ಎರಡು ವರ್ಷ ಕಳೆದರೂ ಯಾರೂ ಹೆಚ್ಚುತೀವ್ರತೆಯನ್ನು ತೋರಿಸಿಲ್ಲ. ಅವರು ಮತ್ತೆ ಈ ಒಂದು ಪ್ರಪೋಸಲ್ ವಿಚಾರದಲ್ಲಿ ಮಾತನಾಡುವುದಕ್ಕೆ ಬರುವುದಕ್ಕೆ ತಯಾರಾಗಿದ್ದಾರೆ. ಈ ವಿಚಾರದಲ್ಲಿ ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ, ಸರಕಾರದವರು ಅವರನ್ನು ಬರಮಾಡಿಕೊಂಡು ಮಾತನಾಡುವುದಕ್ಕೆ ತಯಾರಾಗಿದ್ದಾರೆಯೇ?

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಕೆಲವೊಂದು ವಿಚಾರದಲ್ಲಿ ವರ್ಲ್ಡ್ ಬ್ಯಾಂಕ್ ಮುಂದೆ ಪ್ರಪೋಸಲ್ ಕೊಟ್ಟಿದ್ದೇವೆ. ವರ್ಲ್ಡ್ ಬ್ಯಾಂಕ್ ಜೊತೆಯಲ್ಲಿ ಸರಕಾರ ಚರ್ಚೆ ಮಾಡಿ ಆದಷ್ಟು ಬೇಗನೆ ಹಣವನ್ನು ಪಡೆಯುವ ಕೆಲಸ ಮಾಡುತ್ತದೆ.

ಅಧ್ಯಕ್ಷರು : ಡಿ.ಎ. ಚಿನ್ನಪ್ಪನವರೇ ನಿಮ್ಮ ಪ್ರಶ್ನೆ 511 (2704)ಕ್ಕೆ ಎರಡು ವಾರ ಟೈಮ್ ಕೇಳಿದ್ದಾರೆ

ಶ್ರೀ ಡಿ.ಎ. ಚಿನ್ನಪ್ಪ : ನಾನು ಪ್ರಶ್ನೆ ಹಾಕಿದ್ದೇನೆ.

ಅಧ್ಯಕ್ಷರು : ಅದೇ ಹೇಳಿದೆನಲ್ಲ, ಹದಿನೈದು ದಿವಸ ಸಮಯ ಇದಕ್ಕೆ ಕೇಳಿದ್ದಾರೆ. ಆದಷ್ಟು ಬೇಗ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ : ಅಷ್ಟರಲ್ಲಿ ಅಸೆಂಬ್ಲಿ ಮುಗಿದುಹೋದರೆ.

ಅಧ್ಯಕ್ಷರು : ಆದಷ್ಟು ಬೇಗ ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಮನೆ ಕಂದಾಯ ನಿಗದಿ ಬಗ್ಗೆ

2709 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮನೆಗಂದಾಯ ನಿಗಧಿ ಮಾಡಲು ಸರ್ಕಾರದ ಬಳಿ ವೈಜ್ಞಾನಿಕ ಅಳತೆಗೋಲು ಇದೆಯೇ?

ಆ) ಇದ್ದರೆ ಅದು ಯಾವುದು?

ಇ) ಇಲ್ಲದಿದ್ದಲ್ಲಿ ಯಾವ ವೈಜ್ಞಾನಿಕ ಕ್ರಮವನ್ನು ಅಳವಡಿಸುವಿರಿ ಹಾಗೂ ಎಂದಿನಿಂದ?

ಈ) ಈಗ ಜಾರಿಯಲ್ಲಿರುವ ಅವೈಜ್ಞಾನಿಕ ನಿಗಧಿಯನ್ನು ಮಾರ್ಪಾಡುಗೊಳಿಸಲಾಗುವುದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.